ಜಾನುವಾರುಗಳು ಸತ್ತುಹೋಗಿದ್ದಾವೆ. ಈ ಕಾಯಿಲೆ ಇರುವ ಕಡೆಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಇಂಜಕ್ಷನ್‌ಗಳು, ಗುಳಿಗೆಗಳು ಸಿಗುತ್ತಾ ಇಲ್ಲ, ಇದರಿಂದಾಗಿ ಬಹಳ ಕಷ್ಟಪಡುವಂತಾಗಿದೆ. ಆದುದರಿಂದ ರೈತರ ಹಿತರಕ್ಷಣೆಗಾಗಿ ಈ ಯೋಜನೆಯನ್ನು ಕೈಬಿಡುವುದಕ್ಕಿಂತ ಮುಂದುವರಿಸುವುದು ಒಳ್ಳೆಯದೆಂದು ಕೇಳಿಕೊಳ್ಳುತ್ತೇನೆ. ಈ ಜಾನುವಾರುಗಳ ರೋಗದ ಲಸಿಕೆಯು ಹಿಂದೆ ೧೦ ರೂಪಾಯಿಗಳ ಬೆಲೆಗೆ ಸಿಗುತ್ತಾ ಇತ್ತು, ಈಗ ಅದರ ಬೆಲೆ ಕೇವಲ ನಾಲ್ಕು ರೂಪಾಯಿಗಳು ಆಗಿರುವುದರಿಂದ ಇದಕ್ಕೆ ಮತ್ತೆ ರಿಯಾಯಿತಿ ಕೊಡುವ ಅವಶ್ಯಕತೆ ಇಲ್ಲ ಎಂದು ತೀರ್ಮಾನಿಸಿದ್ದಾರೆ. ಆದರೆ ಮಾನ್ಯ ಸಚಿವರು ಹೇಳಿದಂತೆ ಆ ಲಸಿಕೆಗಳು ಈ ದರದಲ್ಲಿ ಸಿಗುತ್ತಾ ಇಲ್ಲ. ರಿಯಾಯಿತಿ ದರದಲ್ಲಿ ಲಸಿಕೆಗಳನ್ನು ರಿಯಾಯಿತಿ ದರದಲ್ಲಿ ಯಾದರೂ ಎಲ್ಲಾ ಕಡೆಗಳಲ್ಲಿ ಸಿಗುವಂತೆ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ.—ಅಧ್ಯಕ್ಷರೇ, ಈ ಜಾನುವಾರುಗಳಿಗೆ ಬರುವ ಕಾಲು ಬಾಯಿ ಜ್ವರದ ಲಸಿಕೆಯನ್ನು ಮಿಶ್ರ ತಳಿ ಜಾನುವಾರುಗಳಿಗೆ ಹಾಕಿಸುವುದರಿಂದ ಮತ್ತು ಈ ಮಿಶ್ರ ತಳಿ ಜಾನುವಾರುಗಳಿಂದ ಸಾಕಷ್ಟು ಆದಾಯವು ಬರುತ್ತಿರುವುದರಿಂದ ರೈತರಿಗೆ ಎರಡುಬಾರಿ ವರ್ಷಕ್ಕೊಮ್ಮೆ ಲಸಿಕೆ ಹಾಕುವುದಕ್ಕೆ ೮ ರೂಪಾಯಿಗಳು ತಗಲುತ್ತದೆ. ಈ ರೋಗದ ಶೀಕ್ಷಣತೆ ಮಿಶ್ರ ತಳಿಗಳಿಗೆ ಜಾಸ್ತಿ ಇರುತ್ತದೆ. ವರ್ಷಕ್ಕೆ ೮ ರೂಪಾಯಿಗಳನ್ನು ಇದಕ್ಕೆ ಖರ್ಚು ಮಾಡುವುದು ದೊಡ್ಡದೇನೂ ಅಲ್ಲ. ಕರ್ನಾಟಕದಲ್ಲಿ ಸುಮಾರು ೧, ೬೯, ೦೦೦ ಜಾನುವಾರುಗಳಿವೆ. ಈ ಇಡೀ ವೆಚ್ಚವನ್ನು ಸರ್ಕಾರದವರೇ ಭರಿಸುವುದಾದರೆ, ೧೨ ಕೋಟಿರೂಪಾಯಿಗಳು ಆಗುತ್ತದೆ. ಇದರಲ್ಲಿ ಮಿಶ್ರ ತಳಿ ಜಾನುವಾರುಗಳು ೫–೧೦ ಸಾವಿರ ಮಾತ್ರ ಇರಬಹುದೆಂದು. ರೈತರಿಗೆ ಲಸಿಕೆಗಾಗಿ ನಾಲ್ಕು ರೂಪಾಯಿಗಳ ವೆಚ್ಚ ಮಾಡುವುದು ಕಷ್ಟವಾಗಲಿಕ್ಕಿಲ್ಲ ಎಂದು ತಿಳಿದು, ಈ ಯೋಜನೆಯನ್ನು ಕೈಬಿಡಲಾಗಿದೆ.

ಮಹಾಲಿಂಗಪುರಕ್ಕೆ ವಿದ್ಯುತ್ ಕೆಪಾಸಿಟರ್

೧೮೪ (೫೪೮) ಶ್ರೀ ಬಿ. ಜಿ. ಜಮಖಂಡಿ (ಮುಧೋಳ).—ಮಾನ್ಯ ವಾಣಿಜ್ಯ ಕೈಗಾರಿಕೆ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಮುಧೋಳ ತಾಲ್ಲೂಕಿನ ಮಹಾಲಿಂಗಪುರದಲ್ಲಿ ವಿದ್ಯುಚ್ಛಕ್ತಿಯ ಕೆಪಾಸಿಟರ್‌ನ್ನು ಮಂಜೂರು ಮಾಡಲಾಗಿದೆಯೇ ?

ಆ) ಹಾಗಿದ್ದಲ್ಲಿ, ಅದರ ಅಂದಾಜು ವೆಚ್ಚವೆಷ್ಟು ?

ಇ) ಅದರ ಕೆಲಸ ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ,

ಶ್ರೀ ಬಿ. ಜಿ. ಜಮಖಂಡಿ.—ಅಧ್ಯಕ್ಷರೇ, ೧೯೮೬ನೇ ಸೆಪ್ಟೆಂಬರ್ ೧೫ನೇ ತಾರೀಖು ಅಂತ ಕಾಣುತ್ತೆ, ಜಮಖಂಡಿ ಮುಧೋಳ ಮತ್ತು ಬೀಳಗಿ ಮೂರೂ ತಾಲ್ಲೂಕುಗಳನ್ನು ಸೇರಿಸಿಕೊಂಡು ಮಹಾಲಿಂಗಪುರದಲ್ಲಿ ಒಂದು ಕೆಪಾಸಿಟರ್‌ನ್ನು ಮಾಡುವ ಅವಶ್ಯಕತೆ ಇದೆ ಎಂದು ರಾಜ್ಯ ವಿದ್ಯುತ್‌ಮಂಡಲಿಯ ಅಧ್ಯಕ್ಷರು ಹುಬ್ಬಳ್ಳಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ. ಜಮಖಂಡಿ ಮತ್ತು ಮುಧೋಳ ತಾಲ್ಲೂಕುಗಳಲ್ಲಿ ೧೫ ಸಾವಿರಕ್ಕೂ ಮೀರಿದ ಮೋಟಾರ್‌ಗಳು, ಸಾವಿರಾರು ಪಂಪು ಸೆಟ್ಟುಗಳು ಇರುವುದರಿಂದ ವಿದ್ಯುತ್ ಅಭಾವ ಜಾಸ್ತಿ ಇದೆ. ಈ ದೃಷ್ಟಿಯಿಂದ ಮಂಡಲ ಅಧ್ಯಕ್ಷರ ಹೇಳಿಕೆಯನ್ನು ನಾವೆಲ್ಲ ಸ್ವಾಗತಿಸಿದ್ದೆವು. ಆದರೆ ಈಗ ಮಾನ್ಯ ಮಂತ್ರಿಗಳು ಕೆಪಾಸಿಟರ್‌ನ ಅವಶ್ಯಕತೆ ಇಲ್ಲ ಎಂದಿದ್ದಾರೆ. ಇದರಲ್ಲಿ ಯಾರದನ್ನು ಒಪ್ಪಬೇಕು ಸ್ವಾಮಿ,

ಶ್ರೀ ಜೆ. ಹೆಚ್ ಪಟೇಲ್.—ಅವಶ್ಯ ಇಲ್ಲವೆಂದಂ ನಾನು ಹೇಳಿಲ್ಲ. ಮೊದಲಿಗೆ ಈ ಥರ ಕೆಪಾಸಿಟರ್‌ನ್ನು ಕೂರಿಸುವ ಆಲೋಚನೆ ಇತ್ತು. ಆದರೆ ಮಹಾಲಿಂಗಪುರದಲ್ಲೇ ಹಾಲಿ ಇರುವ ಸ್ಟೇಷನ್ ಅನ್ನು ಮತ್ತು ಲೈನ್ಸ್‌ನ್ನು ಜಾಸ್ತಿ ಶಕ್ತಿಗೊಳಿಸುತ್ತಿದ್ದೇವೆ. ಅಂದರೆ ೨೧೦ ಕೆವಿ ಪವರ್ ಸ್ಟೇಷನ್‌ನ್ನಾಗಿ ಮಾಡುತ್ತಿದ್ದೇವೆ ಆದ್ದರಿಂದಲೇ ಕೆಪಾಸಿಟರ್ ಕೂರಿಸುವ ಅವಶ್ಯಕತೆ ಇಲ್ಲ ಎಂದಿದ್ದು.